**ಊ. ಮಾದರಿಯಂತೆ ಸಕರ್ಮಕ ಹಾಗೂ ಅಕರ್ಮಕ ಧಾತುಗಳನ್ನು ಗುರುತಿಸಿ ಬರೆಯಿರಿ.**

ಇಳಿ ಬರು
ಬರೆ ಬರೆ ಕೂಡು
ಮಲಗು ಮೆಟ್ಟು ಇರು ಬಿಡು ಏರು ಬೀಳು
ತಿದ್ದು ಕೆರೆ ತೆರೆ ತುಂಬು
ಏರು ಓದು ದಾಟು ಮುಟ್ಟು
ಹೆದರು ಸೇರು ಓದು

**ಮಾದರಿ :** ಸಕರ್ಮಕ – ತಿನ್ನು, ಅಕರ್ಮಕ – ಹೋಗು

| **ಸಕರ್ಮಕ ಧಾತು** | | **ಅಕರ್ಮಕ ಧಾತು** | |
|---|---|---|---|
| | | | |
| | | | |
| | | | |
| | | | |
| | | | |

**ಋ. ಅಕ್ಷರ ಬಳಸಿ ಪದ ರಚಿಸಿ ತಿರುಗಿಸಿ ಓದಿ ಆನಂದಿಸಿ ಹಾಗೂ ಈ ರೀತಿಯ ಪದಗಳನ್ನು ಬರೆಯಿರಿ.**

**ಮಾದರಿ :** ವಿ ಕ ಕ ಟ ವಿ – **ವಿಕಟಕವಿ** ಮನನ – **ನಮನ**

[ಈ ಪದಗಳನ್ನು ಎಡದಿಂದ ಬಲಕ್ಕೆ ಹಾಗೂ ಬಲದಿಂದ ಎಡಕ್ಕೆ ಓದಿದರೆ ಒಂದೇ ರೀತಿ ಇರುತ್ತದೆ.]

1. ರಸುರಸುರ – ______ 2. ಜೀವವನನ – ______
3. ______ ______ 4. ______ ______
5. ______ ______ 6. ______ ______
7. ______ ______ 8. ______ ______
9. ______ ______ 10. ______ ______

@KTBS NOT TO BE REPUBLISHED

ಎ. ವಿದ್ಯರ್ಥಕ, ಸಂಭಾವನಾರ್ಥಕ ಹಾಗೂ ನಿಷೇಧಾರ್ಥಕ ಕ್ರಿಯಾಪದಗಳನ್ನು ಗುರುತಿಸಿ.

**ಮಾದರಿ:**

| | |
|---|---|
| 1) ನಿಮಗೆ ಎಂದೆಂದಿಗೂ ಶುಭವಾಗಲಿ. | **ಶುಭವಾಗಲಿ – ವಿದ್ಯರ್ಥಕ ಕ್ರಿಯಾಪದ** |
| 2) ರಂಗಪ್ಪ ಯಾರಿಗೂ ಕೆಟ್ಟದ್ದನ್ನು ಬಯಸನು. | **ಬಯಸನು – ನಿಷೇಧಾರ್ಥಕ ಕ್ರಿಯಾಪದ** |
| 3) ತಂದೆ–ತಾಯಿಗಳು ತಮ್ಮ ಮಕ್ಕಳು ತಮಗೆ ಕೀರ್ತಿಯನ್ನು ತಂದಾರು ಎಂದು ಆಶಿಸುತ್ತಾರೆ. | **ಆಶಿಸುತ್ತಾರೆ – ಸಂಭಾವನಾರ್ಥಕ ಕ್ರಿಯಾಪದ** |

| | |
|---|---|
| ➢ ಹಿಡಂಬಿಯು ಭೀಮನು ಬಂದಾನು ಎಂದು ಕಾಯುತ್ತಿದ್ದಳು. | |
| ➢ ಶ್ರೀರಾಮ ಬೇಗ ಬರಲಿ ಎಂದು ಶಬರಿ ಕಾದಿದ್ದಳು. | |
| ➢ ನಾಟಕವು ಆನಂದವನ್ನು ತಂದೀತು. | |
| ➢ ನಮ್ಮ ದೇಶದಲ್ಲಿ ಶಾಂತಿ ನೆಲೆಸಲಿ. | |
| ➢ ಒಳ್ಳೆಯ ಮಕ್ಕಳು ಎಂದೂ ಕೆಟ್ಟ ಕೆಲಸವನ್ನು ಮಾಡರು. | |
| ➢ ಒಳ್ಳೆಯ ಚಿತ್ರಗಳು ಜನರಲ್ಲಿ ಜಾಗೃತಿಯನ್ನು ತಂದೀತು. | |
| ➢ ಹುಲಿಯು ಹುಲ್ಲನ್ನು ತಿನ್ನದು. | |
| ➢ ತಿಮ್ಮನು ಆಟಕ್ಕೆ ಬಾರನು. | |
| ➢ ಕನ್ನಡಾಂಬೆಗೆ ಜಯವಾಗಲಿ. | |
| ➢ ನಮ್ಮ ನಡೆನುಡಿ ನೇರವಾಗಿರಲಿ. | |

ಏ. ಕೆಳಗಿನ ಮಾದರಿಯನ್ನು ಗಮನಿಸಿ. ಪ್ರತಿ ಪದದ ಕೊನೆಯ ಅಕ್ಷರದಿಂದ ಮತ್ತೊಂದು ಪದವನ್ನು ರಚಿಸಿ.

**ಮಾದರಿ :** ಧರ್ಮರಾಯ → ಯಮರಾಜ → ಜಯದೇವ → ವನಸುಮ → ಮಣಿಕಂಠ → ಠಸ್ಸೆ

1. → → → → →

2. → → → → →

3. → → → → →

4. → → → → →

ಐ. ಕ್ರಿಯಾ ಪದಗಳು– ಅರ್ಥ ರೂಪ ಕ್ರಿಯಾ ಪದಗಳು

| | |
|---|---|
| ಕೃಷ್ಣನು ಹಣ್ಣನ್ನು ತಿಂದಾನು. | |

@KTBS NOT TO BE REPUBLISHED

# ಕ್ರಿಯಾಪದ– ಕಾಲಗಳು

**ಒ. ಕೆಳಗಿನ ವಾಕ್ಯಗಳಲ್ಲಿರುವ ಕ್ರಿಯಾಪದಗಳ ಕಾಲಗಳನ್ನು ಆವರಣದಲ್ಲಿ ಸೂಚಿಸಿದಂತೆ ಬದಲಿಸಿ ಬರೆಯಿರಿ.**

| |
|---|
| ಮಕ್ಕಳು ಆಟವನ್ನು ಆಡಿದರು. (ವರ್ತಮಾನ) |
| |
| ತಾಯಿಯು ಮಗುವಿಗೆ ಅನ್ನವನ್ನು ತಿನ್ನಿಸುತ್ತಾಳೆ. (ಭೂತಕಾಲ) |
| |
| ರಹೀಮನು ಊರನ್ನು ಸೇರಿದನು. (ಭವಿಷ್ಯತ್) |
| |
| ರಾಬರ್ಟನು ಹೊಲವನ್ನು ಕೊಳ್ಳುವನು. (ಭೂತಕಾಲ) |
| |
| ಗ್ರೇಸಿಯು ನನ್ನನ್ನು ಹೊಗಳಿದಳು. (ಭವಿಷ್ಯತ್) |
| |

NOT TO BE REPUBLISHED @KTBS

# ಕ್ರಿಯಾಪದ– ಕ್ರಿಯಾರೂಪಗಳು

**ಓ. ಕೆಳಗಿನ ವಾಕ್ಯಗಳನ್ನು ಆವರಣದಲ್ಲಿ ಕೊಟ್ಟಿರುವಂತೆ ಪರಿವರ್ತಿಸಿ ಬರೆಯಿರಿ.**

| |
|---|
| ಮಕ್ಕಳು ಹಾಲನ್ನು ಕುಡಿಯಲಿ. (ಸಂಭಾವನಾರ್ಥಕ) |
| |
| ಹುಸೇನನು ಶಾಲೆಗೆ ಬಂದಾನು. [ವಿಧ್ಯರ್ಥಕ] |
| |
| ಅವಳು ನನ್ನನ್ನು ಹೊಡೆದಳು. [ನಿಷೇಧಾರ್ಥಕ] |
| |
| ಹುಡುಗನು ಲೇಖನಿಯಿಂದ ಬರೆದನು. [ವಿಧ್ಯರ್ಥಕ] |
| |
| ನಾವು ಹಣ್ಣನ್ನು ತಂದೆವು. [ಸಂಭಾವನಾರ್ಥಕ] |
| |

**ಔ. ಕೆಳಗಿನ ವಾಕ್ಯಗಳನ್ನು ಕರ್ತರಿ / ಕರ್ಮಣಿ ಪ್ರಯೋಗದ ವಾಕ್ಯಗಳನ್ನಾಗಿ ಪರಿವರ್ತಿಸಿ ಬರೆಯಿರಿ.**

**ಮಾದರಿ :** 1) ಅಣ್ಣನು ಹಾಲನ್ನು ಕುಡಿದನು – **ಕರ್ತರಿ ಪ್ರಯೋಗ**

2) ಹಾಲು ಅಣ್ಣನಿಂದ ಕುಡಿಯಲ್ಪಟ್ಟಿತು – **ಕರ್ಮಣಿ ಪ್ರಯೋಗ**

| |
|---|
| ಶಿವರಾಮ ಕಾರಂತರು ಜಯಪುರವನ್ನು ನೋಡಿದರು. |
| |
| ಬಡವರು ಶ್ರೀಮಂತರಿಂದ ಹಿಂಸಿಸಲ್ಪಡುವರು. |
| |
| ಬಸವಣ್ಣನವರು ಅನೇಕ ವಚನಗಳನ್ನು ರಚಿಸಿದ್ದಾರೆ. |
| |
| ಪ್ರಾಣಿಗಳು ವಿವೇಕಿಯಿಂದ ಹಿಂಸಿಸಲ್ಪಡುವುದಿಲ್ಲ. |
| |
| ಸೈನಿಕರು ವೀರಾವೇಶದಿಂದ ಯುದ್ಧವನ್ನು ಮಾಡಿದರು. |
| |
| ನೀರು ಹಸುವಿನಿಂದ ಕುಡಿಯಲ್ಪಟ್ಟಿತು. |
| |

©KTBS NOT TO BE REPUBLISHED

**ಅಂ. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ಸಂಭಾಷಣೆ :
2. ನಿರ್ದೇಶನ :
3. ನಿರ್ಮಾಣ :
4. ಸಂಕಲನ :
5. ಅಲಂಕಾರ :
6. ನಟನೆ :
7. ಚಿತ್ರಕಥೆ :

ಅಃ. ಮಾದರಿಯಂತೆ ತತ್ಸಮಗಳಿಗೆ ತದ್ಭವಗಳನ್ನು ಬರೆಯಿರಿ.

**ಮಾದರಿ:** ತತ್ಸಮ – ಆರ್ಯ ತದ್ಭವ – ಅಜ್ಜ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ಆಶ್ಚರ್ಯ | | ಘಂಟಾ | |
| ಕಾಷ್ಠ | | ಅಮೃತ | |
| ಕಸ್ತೂರಿ | | ಚಂಪಕ | |
| ಕಾರ್ಯ | | ಮಲ್ಲಿಕಾ | |
| ಕೀರ್ತಿ | | ಚತುರ್ಥಿ | |
| ಕುಮಾರಿ | | ಶ್ರೀ | |
| ಗಂಗಾ | | ಜನ್ಮ | |
| ಗೃಹ | | ತಟ | |
| ಗೋಷ್ಠಿ | | ತಪಸ್ವಿ | |
| ದಿಶಾ | | ಪತಿವ್ರತೆ | |
| ಕ್ಷಣ | | ಪಶು | |
| ಕಾಕ | | ಪುಸ್ತಕ | |
| ಕೋಕಿಲಾ | | ಸಂಧ್ಯಾ | |
| ಗ್ರಂಥಿ | | ಹಂಸ | |
| ಭೂಮಿ | | ಶಶಿ | |
| ತೃತೀಯಾ | | ಶೂನ್ಯ | |
| ಚೂರ್ಣ | | ಶೃಂಗಾರ | |
| ಗ್ರಾಹಕ | | ವೇಗ | |
| ಹಂಸ | | ಲಕ್ಷ್ಮಿ | |
| **ಸಂಸ್ಕೃತ** | | **ವೇತ್ರ** | |
| ಯುದ್ಧ | | ಭಕ್ತ | |
| ವೃಷಭ | | ಬಿನ್ನಹ | |
| ರಾಜ | | ಚಂದ್ರ | |
| ವರ್ಷ | | ಸುಧಾ | |
| ಯುಗ | | ಧ್ವನಿ | |

@KTBS NOT TO BE REPUBLISHED

**ಕೆಳಗಿನ ಗದ್ಯಭಾಗವನ್ನು ಓದಿ ಅರ್ಥೈಸಿಕೊಳ್ಳಿ. ಸಾಧ್ಯವಾದಷ್ಟು ಅರ್ಥಪೂರ್ಣ ಪ್ರಶ್ನೆಗಳನ್ನು ರಚಿಸಿ ಅದಕ್ಕೆ ಸೂಕ್ತ ಉತ್ತರವನ್ನು ಗದ್ಯಭಾಗದಿಂದ ಆರಿಸಿ ಬರೆಯಿರಿ.**

## ಭಗೀರಥ

ಪುರಾಣಕಾಲದಲ್ಲಿ ಭಗೀರಥ ಎಂಬ ದೊರೆ ಇದ್ದನು. ಅವನ ಅರವತ್ತು ಸಾವಿರ ಜನ ತಾತಂದಿರು ಕಪಿಲ ಮುನಿಯ ಕೋಪಕ್ಕೆ ಸಿಕ್ಕಿ ಸುಟ್ಟು ಭಸ್ಮವಾಗಿದ್ದರು. ಅವರಿಗೆ ಸ್ವರ್ಗ ಲಭಿಸಬೇಕೆಂದು ಭಗೀರಥನು ಚಿಂತಿಸುತ್ತಿದ್ದನು. ಅದಕ್ಕೆ ದೇವಲೋಕದ ಗಂಗೆಯನ್ನು ಭೂಮಿಗೆ ತಂದು, ಅವನ ತಾತಂದಿರ ಬೂದಿಯ ಮೇಲೆ ಹರಿಸಬೇಕೆಂದು ಜ್ಞಾನಿಗಳಾದ ಋಷಿಗಳು ಹೇಳಿದರು.

ದೇವಲೋಕದ ಗಂಗೆಯನ್ನು ಭೂಮಿಗೆ ತರುವುದು ಅಸಾಧ್ಯವಾದ ಕೆಲಸವಾಗಿತ್ತು. ಆದರೆ ಭಗೀರಥ ತನ್ನ ನಿರ್ಧಾರದಿಂದ ಎಳ್ಳಷ್ಟು ಹಿಂದೆ ಸರಿಯಲಿಲ್ಲ. ಎಷ್ಟೇ ಕಷ್ಟವಾದರೂ ಗಂಗೆಯನ್ನು ಭೂಮಿಗೆ ತಂದೇ ತರುತ್ತೇನೆಂದು ತಪಸ್ಸಿಗೆ ಕುಳಿತ. ಬಾಯಾರಿಕೆ, ಹಸಿವು, ನಿದ್ರೆಯನ್ನು ಮರೆತ. ಬಿಸಿಲು, ಮಳೆ, ಬಿರುಗಾಳಿಯನ್ನು ಸಹಿಸಿಕೊಂಡ.

ಅನೇಕ ವರ್ಷಗಳ ಕಠಿಣ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷಳಾದ ಗಂಗೆ "ನಿನ್ನ ಇಚ್ಛೆಯಂತೆ ನಾನು ಭೂಮಿಗೆ ಧುಮುಕುತ್ತೇನೆ. ಆದರೆ, ನನ್ನ ರಭಸವನ್ನು ತಡೆಯುವವರು ಯಾರು?" ಎಂದಳು.

ಚಿಂತಾಕ್ರಾಂತನಾದ ಭಗೀರಥ ಮತ್ತೆ ತಪಸ್ಸಿಗೆ ಕುಳಿತ. ಆಗ ಅವನಿಗೆ ಬ್ರಹ್ಮದೇವ ಪ್ರತ್ಯಕ್ಷನಾದ. ಭಗೀರಥನ ಪ್ರಾರ್ಥನೆಗೆ ಬ್ರಹ್ಮದೇವನು ಮೆಚ್ಚಿ, ಶಿವನನ್ನು ಕುರಿತು ತಪಸ್ಸು ಮಾಡು ಎಂದು ಸಲಹೆ ನೀಡಿದ. ಅದರಂತೆ ಭಗೀರಥ ತಪಸ್ಸನ್ನು ಮುಂದುವರಿಸಿದ. ಅವನ ಕಠಿಣ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಶಿವ "ನಿನ್ನ ಧೈರ್ಯ, ಭಕ್ತಿ, ದೃಢಸಂಕಲ್ಪವನ್ನು ಮೆಚ್ಚಿದ್ದೇನೆ. ಧುಮ್ಮಿಕ್ಕುವ ಗಂಗೆಯನ್ನು ತಡೆದು ನಾನು ಶಿರದಲ್ಲಿ ಧರಿಸುತ್ತೇನೆ. ಗಂಗೆ ನನ್ನ ಶಿರದಿಂದ ಭೂಮಿಗೆ ಇಳಿದು, ನಿನ್ನನ್ನು ಹಿಂಬಾಲಿಸುವಳು" ಎಂದನು.

ಅಂತೆಯೇ ಭೋರ್ಗರೆಯುತ್ತ ಧುಮ್ಮಿಕ್ಕಿದ ಗಂಗೆಯನ್ನು ಶಿವನು ಜಟೆಯಲ್ಲಿ ತಡೆದು ಭೂಮಿಗೆ ಹರಿಯಬಿಟ್ಟನು. ಗಂಗೆ ರಭಸದಿಂದ ಹರಿಯುವಾಗ ಜಹ್ನು ಮಹರ್ಷಿಯ ಆಶ್ರಮ ಕೊಚ್ಚಿಕೊಂಡು ಹೋಯಿತು. ಇದರಿಂದ ಕೋಪಗೊಂಡ ಮಹರ್ಷಿಯು ಗಂಗೆಯನ್ನು ಒಂದೇ ಗುಟುಕಿಗೆ ಕುಡಿದು ಬಿಟ್ಟನು.

ಇಷ್ಟೆಲ್ಲಾ ಪ್ರಯತ್ನಗಳ ನಂತರವೂ ಗಂಗೆ ಸಿಗಲಿಲ್ಲ. ಆದರೂ ಭಗೀರಥ ಎದೆಗುಂದದೆ, ಜಹ್ನು ಮಹರ್ಷಿಯನ್ನು ತನ್ನ ಪ್ರಾರ್ಥನೆಯಿಂದ ಮೆಚ್ಚಿಸಿದ. ತನ್ನ ಪಿತೃಗಳ ಸದ್ಗತಿಗಾಗಿ ಭಗೀರಥ ಮಾಡುತ್ತಿರುವ ಪ್ರಯತ್ನವನ್ನು ಮೆಚ್ಚಿ ಮಹರ್ಷಿ, ಗಂಗೆಯನ್ನು ತನ್ನ ಕಿವಿಯಿಂದ ಹರಿಯಲು ಬಿಟ್ಟನು.

ಕೊನೆಗೆ ಭಗೀರಥ ಗಂಗೆಯನ್ನು ಭೂಮಿಗೆ ತರಲು ಮಾಡಿದ ಸಾಹಸಕ್ಕೆ ಫಲ ದೊರೆಯಿತು. ಭಗೀರಥನ ಪ್ರಾರ್ಥನೆಯನ್ನು ಮನ್ನಿಸಿ ಹಿಂಬಾಲಿಸಿದ ಗಂಗೆ ಹರಿದು ಅವನ ತಾತಂದಿರ ಬೂದಿಯನ್ನು ತೊಯ್ದಳು. ಅವರಿಗೆ ಸ್ವರ್ಗ ಲಭಿಸಿತು. ಎಷ್ಟೇ ಅಡ್ಡಿ ಆತಂಕಗಳು ಬಂದರೂ, ಭಗೀರಥ ಎದೆಗುಂದದೆ ತನ್ನ ದೃಢಸಂಕಲ್ಪದಿಂದ ಅಂದುಕೊಂಡ ಕಾರ್ಯವನ್ನು ಸಾಧಿಸಿದ.

© KTBS NOT TO BE REPUBLISHED

**ಮಾದರಿ :** ಪ್ರಶ್ನೆ : ಜ್ಞಾನಿಗಳಾದ ಋಷಿಗಳು ಭಗೀರಥನಿಗೆ ಏನೆಂದು ಹೇಳಿದರು?

ಉತ್ತರ : ದೇವಲೋಕದ ಗಂಗೆಯನ್ನು ಭೂಮಿಗೆ ತಂದು, ಅವನ ತಾತಂದಿರ ಬೂದಿಯ ಮೇಲೆ ಹರಿಸಬೇಕೆಂದು ಜ್ಞಾನಿಗಳಾದ ಋಷಿಗಳು ಹೇಳಿದರು.

**ಪ್ರಶ್ನೆ :**

**ಉತ್ತರ :**

**ಪ್ರಶ್ನೆ :**

**ಉತ್ತರ :**

**ಪ್ರಶ್ನೆ :**

**ಉತ್ತರ :**

**ಪ್ರಶ್ನೆ :**

**ಉತ್ತರ :**

**ಪ್ರಶ್ನೆ :**

**ಉತ್ತರ :**

**ಪ್ರಶ್ನೆ :**

**ಉತ್ತರ :**

**ಪ್ರಶ್ನೆ :**

**ಉತ್ತರ :**

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಮಾನಕಗಳು | ☺ | 😐 | ☹ |
|---|---|---|---|---|
| 1. | ಪ್ರಶ್ನೆ ಮಾಡುವ ಕೌಶಲ್ಯವನ್ನು ಬೆಳೆಸಿಕೊಳ್ಳುವೆನು. | | | |
| 2. | ಪದಗಳಿಂದ ವ್ಯಾಕರಣಬದ್ಧವಾಗಿ ವಾಕ್ಯಗಳನ್ನು ರಚಿಸುವೆನು. | | | |

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|---|---|

# 7. ಘಟಕ ಪರೀಕ್ಷೆ–3

**1. ಕೆಳಕಂಡ ವಾಕ್ಯಗಳು ಯಾವ ಕಾಲದಲ್ಲಿ ಇವೆ ಎಂಬುದನ್ನು ಗುರುತಿಸಿ ಬರೆಯಿರಿ.**

1. ರೈತರು ಮಳೆಗಾಲದಲ್ಲಿ ಬೇಸಾಯವನ್ನು ಮಾಡುವರು.
2. ನಮ್ಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದೆವು.
3. ನಮ್ಮ ಊರಿನ ಜಾತ್ರೆಯು ವೈಭವದಿಂದ ನಡೆಯುತ್ತಿದೆ.
4. ನಿಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಸಾವಿರಾರು ದೇಶಭಕ್ತರು ಹೋರಾಡಿದ್ದಾರೆ.
5. ರಾಗಿಣಿ ಸುಮಧುರವಾಗಿ ಹಾಡನ್ನು ಹಾಡುವಳು.

**2. ಕೆಳಕಂಡ ಕ್ರಿಯಾಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ.**

**[ನೋಡಿದರು, ಹೋಗುವೆನು, ಕಲಿತರು, ಜಿಗಿಯಿತು, ಬಿಡಿಸಿದಳು, ನೋಡಿದರು]**

1.
2.
3.
4.
5.
6.

**3. ಕ್ರಿಯಾಪದಗಳ ಧಾತುಗಳನ್ನು ಹೊಂದಿಸಿ ಬರೆಯಿರಿ.**

| ‘ಅ’ | ‘ಆ’ | ಉತ್ತರ |
|---|---|---|
| 1. ಮಾಡುವಳು | ಕುಣಿ | 1. |
| 2. ಹೋಯಿತು | ಹರಸು | 2 |
| 3. ಸುರಿಯಿತು | ಮಾಡು | 3. |
| 4. ಕುಣಿದಾಡಿದನು | ಹೋಗು | 4. |
| 5. ಹರಸಿದರು | ಸುರಿ | 5. |

**4. ಕರ್ತರಿ ಪ್ರಯೋಗದ ವಾಕ್ಯಗಳನ್ನು ಕರ್ಮಣಿ ಪ್ರಯೋಗದ ವಾಕ್ಯಗಳಾಗಿ ಪರಿವರ್ತಿಸಿ.**

1. ಮಗು ಹಾಲನ್ನು ಕುಡಿಯಿತು.
   ಕರ್ಮಣಿ ವಾಕ್ಯ :
2. ಬೆಕ್ಕು ಇಲಿಯನ್ನು ಹಿಡಿಯಿತು.
   ಕರ್ಮಣಿ ವಾಕ್ಯ :
3. ಸೈನಿಕರು ದೇಶದ ರಕ್ಷಣೆ ಮಾಡಿದರು.
   ಕರ್ಮಣಿ ವಾಕ್ಯ :
4. ಕವಯಿತ್ರಿಯು ಕವಿತೆಯನ್ನು ಬರೆದಳು.
   ಕರ್ಮಣಿ ವಾಕ್ಯ :

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|---|---|

@KTBS NOT TO BE REPUBLISHED

# 8. ಅಭ್ಯಾಸ

| ವಾಕ್ಯ ರಚನೆ | |
|---|---|
| **ವಾಕ್ಯದ ವಿಧ** | : ಸಾಮಾನ್ಯ, ಸಂಯೋಜಿತ, ಮಿಶ್ರವಾಕ್ಯ |
| **ಲೇಖನ ಚಿಹ್ನೆಗಳು** | : ಪೂರ್ಣವಿರಾಮ, ಅಲ್ಪವಿರಾಮ, ಅರ್ಧವಿರಾಮ, ಪ್ರಶ್ನಾರ್ಥಕ, ಭಾವಸೂಚಕ, ಉದ್ಧರಣ, ವಾಕ್ಯವೇಷ್ಠನ |
| **ಅವ್ಯಯಗಳು** | : ಸಾಮಾನ್ಯ, ಅನುಕರಣ, ಭಾವಸೂಚಕ ಕ್ರಿಯಾರ್ಥಕ, ಸಂಬಂಧಾರ್ಥಕ, ಕೃದಂತ ತದ್ಧಿತಾಂತ, ಅವಧಾರಣಾರ್ಥಕಾವ್ಯಯ |

**ಸಂಭಾಷಣೆ**

ಸನ್ನಿವೇಶ ನೀಡಿ ಸಂಭಾಷಣೆ ಹೆಣೆಯುವುದು.
ಅಪೂರ್ಣ ಸಂಭಾಷಣೆಯನ್ನು ಪೂರ್ಣಗೊಳಿಸುವುದು.
ಆಯ್ದ ಗದ್ಯಭಾಗವನ್ನು ಸಂಭಾಷಣೆಯ ರೂಪದಲ್ಲಿ ಬರೆಯುವುದು.

**ಕಥೆ ಬರೆಯುವುದು**

ಸುಳಿವುಗಳನ್ನು ನೋಡಿ ಕಥೆ ರಚಿಸುವುದು.
ಚಿತ್ರ ನೋಡಿ ಕಥೆ ರಚನೆ.
ಕಥೆಯ ಅರ್ಧಭಾಗವನ್ನು ಪೂರ್ಣಗೊಳಿಸುವುದು.

**ಚಿತ್ರ ವರ್ಣಿಸುವುದು**

ಚಿತ್ರ ಓದಿ ವಿವರಿಸುವುದು.
ಚಿತ್ರ ನೋಡಿ ಕವಿತೆ ರಚಿಸುವುದು–ಸ್ಮರಿಸುವುದು.

**ಪ್ರಬಂಧ / ಪತ್ರ ಬರೆಯುವುದು**

ನೀಡಿದ ವಿಷಯದ ಬಗ್ಗೆ ಪ್ರಬಂಧ ಬರೆಯುವುದು.
ಪತ್ರಲೇಖನವನ್ನು ಸೂಕ್ತ ಲೇಖನ ಚಿಹ್ನೆಯೊಂದಿಗೆ ಬರೆಯುವುದು.

@KTBS NOT TO BE REPUBLISHED

**ಅ. ಕೆಳಗಿನ ಚಿತ್ರಗಳನ್ನು ಗಮನಿಸಿ. ಇವು ನಮ್ಮ ರಾಜ್ಯದ ವಿಶೇಷ ನೃತ್ಯ ಪ್ರಕಾರಗಳು. ಕೊಟ್ಟಿರುವ ಮಾದರಿಯನ್ನು ಗಮನಿಸಿ ಉಳಿದ ನೃತ್ಯಗಳ ಬಗ್ಗೆ ಲಘು ಮಾಹಿತಿಯನ್ನು ಸಿದ್ಧಪಡಿಸಿ.**



**೧. ಕಂಸಾಳೆ ನೃತ್ಯ :**

ಕಂಸಾಳೆ ನೃತ್ಯದವರು ಮಲೆಯ ಮಹದೇಶ್ವರನ ಭಕ್ತರಾದ ದೇವರಗುಡ್ಡರು. ಇವರು ತಟ್ಟುತ್ತಿರುವುದು ಕಂಚಿನ ತಾಳ. ಅದಕ್ಕೆ 'ಕಂಸಾಳೆ' ಎಂದು ಹೆಸರು. ಅದರಲ್ಲಿ ಅಂಗೈ ಅಗಲ ಚಕ್ರಾಕಾರದ ಬಟ್ಟಲು ಮತ್ತು ಜಾಗಟೆಯಂತಿರುವ ಮಟ್ಟಸವಾದ ಮೇಲು ತಾಳ ಇರುತ್ತದೆ. ಇವರು ಬಟ್ಟಲನ್ನು ಎಡಗೈಯ ಅಂಗೈ ಮೇಲೆ ಇರಿಸಿ ಬಲಗೈಯ ಮೇಲು ತಾಳದಿಂದ ತಟ್ಟುತ್ತಿದ್ದಾರೆ. ಇದರಿಂದ ಮಧುರ ನಾದ ಬರುತ್ತದೆ. ಇವರು ಮಹದೇಶ್ವರನನ್ನು ಕುರಿತು ಹಾಡುತ್ತಾ ಬಾಗಿ, ಬಳುಕಿ, ಕುಳಿತು, ನಿಂತು ಲಯವಾಗಿ ಕಂಸಾಳೆಯನ್ನು ತಟ್ಟುತ್ತಾ ನರ್ತಿಸುತ್ತಿದ್ದಾರೆ. ಇವರು ಕಂಸಾಳೆಯನ್ನು ಬೀಸುತ್ತಾ ನೃತ್ಯ ಮಾಡುತ್ತಿದ್ದಾರೆ ಇದಕ್ಕೆ 'ಬೀಸು ಕಂಸಾಳೆ' ಎಂದು ಹೆಸರು. ಕಂಸಾಳೆ ನೃತ್ಯವನ್ನು ಜಾತ್ರೆ, ಕಲಾ ಮೇಳ, ಹಬ್ಬ, ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿ ಮಾಡುತ್ತಾರೆ.

@KTBS NOT TO BE REPUBLISHED

**೨. ಡೊಳ್ಳು ಕುಣಿತ**



### ಇ. ಯಕ್ಷಗಾನ



@KTBS
NOT TO BE REPUBLISHED

### ಈ. ಭರತನಾಟ್ಯ



ಆ. ಕೆಳಗಿನ ಚಿತ್ರಗಳನ್ನು ಗಮನಿಸಿ. ಇದು ಒಂದು ಪ್ರಾಣಿ ಸಂಗ್ರಹಾಲಯದ ಚಿತ್ರ. ಇಲ್ಲಿ ಅನೇಕ ಸೂಚನಾ ಫಲಕಗಳನ್ನು ಬರೆದು ಹಾಕಿದ್ದಾರೆ. ಈ ಸೂಚನೆಗಳ ಬಗ್ಗೆ ನಿಮಗ ಅನಿಸಿದ್ದನ್ನು ಮೂರು ನಾಲ್ಕು ವಾಕ್ಯಗಳಲ್ಲಿ ಬರೆಯಿರಿ ಹಾಗೂ ಈ ಸಂಗ್ರಹಾಲಯದಲ್ಲಿ ಇರಲೇಬೇಕಾದ ಇತರ ಸೂಚನೆಗಳು ಯಾವುವು ಎಂಬುದನ್ನು ಬರೆಯಿರಿ.




ಮಾದರಿ : 1. ಎಚ್ಚರಿಕೆ! ಪ್ರಾಣಿಗಳನ್ನು ಹಿಂಸಿಸಬಾರದು.

| |
|---|
| |
| |

2.

| |
|---|
| |
| |

3.

| |
|---|
| |
| |

ಇತರ ಸೂಚನೆಗಳು :

| | |
|---|---|
| 1. | 3. |
| 2. | 4. |

@KTBS NOT TO BE REPUBLISHED

ಇ. 'ಹಳೆಗನ್ನಡ' ಪದಗಳಿಗೆ 'ಹೊಸಗನ್ನಡ' ಪದಗಳನ್ನು ಬರೆಯಿರಿ.

ಮಾದರಿ: ಹಳೆಗನ್ನಡ – ಹೊಸಗನ್ನಡ

ಪೊನ್ – ಹೊನ್ನು

| ಹಳೆಗನ್ನಡ | ಹೊಸಗನ್ನಡ | ಹಳೆಗನ್ನಡ | ಹೊಸಗನ್ನಡ |
|---|---|---|---|
| ಕಾಲ್ಗಳಂ | | ಪಾಲ್ | |
| ಪೇಳ್ | | ಇರ್ಪೊಡೆ | |
| ಬರ್ಪ | | ಏತರ್ಕೆ | |
| ಕಿವಿಯೊಳ್ | | ರೂಪಮಂ | |
| ನಿಲ್ | | ಪರಿದು | |
| ಒರ್ವನೆ | | ಪುರ್ವು | |
| ನೆಗಳ್ದ | | ಉರ್ಚು | |
| ಕರ್ಬೊಗೆ | | ಬಾಚಿಸಿದಂ | |
| ತೀರ್ದಪುದೆ | | ಪೊಳಲ್ | |
| ಐಸಕ್ಕೆ | | ಬರ್ಪರ್ | |
| ಬೆಮರ್ತನ್ | | ಪೊಳ್ತು | |

ಈ. ಮಾದರಿಯಂತೆ ಪದಗಳನ್ನು ಬರೆಯಿರಿ.

ಮಾದರಿ: ಟ್ಟು – ಕಟ್ಟು – ಅಟ್ಟು – ತಟ್ಟು – ಪೆಟ್ಟು – ಸಿಟ್ಟು – ಮಟ್ಟು – ರಟ್ಟು – ಪುಟ್ಟು – ಹುಟ್ಟು

| | |
|---|---|
| 1. | ಡ್ಡ – – – – – – – – |
| 2. | ಪ್ಪ – – – – – – – – |
| 3. | ತ್ತ – – – – – – – – |
| 4. | ಕ್ಕ – – – – – – – – |
| 5. | ಗ್ಗ – – – – – – – – |
| 6. | ನ್ನ – – – – – – – – |
| 7. | ಣ್ಣ – – – – – – – – |

## ಉ. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

**ಮಾದರಿ:** ಕಮಲ : ತಾವರೆ, ಪಂಕಜ

| | ಸಮಾನಾರ್ಥಕ ಪದ | | ಸಮಾನಾರ್ಥಕ ಪದ |
|---|---|---|---|
| ಆಕಾಶ | | ರಾಜ | |
| ಭೂಮಿ | | ನಯನ | |
| ನೀರು | | ಹೆಂಡತಿ | |
| ಕಾಡು | | ಹುಟ್ಟು | |
| ಯುದ್ಧ | | ಆಶ್ಚರ್ಯ | |
| ಬೆಂಕಿ | | ಕುದುರೆ | |
| ತಾಯಿ | | ಚಂದ್ರ | |
| ಮಗ | | ಮಸ್ತಕ | |
| ಮುಖ | | ವನ | |
| ಮರ | | ನಾಲಗೆ | |
| ದೇಹ | | ಹಂಬಲ | |
| ಕಣ್ಣು | | ಸಮುದ್ರ | |
| ಸೂರ್ಯ | | ಜಳಕ | |
| ತಾಣ | | ತಂಡ | |
| ಕಂಬನಿ | | ದಿನಕರ | |
| ಖಗ | | ಮಯೂರ | |
| ಚಂದನ | | ನಿಕಟ | |
| ಛಾಯೆ | | ಶ್ವೇತ | |
| ಹಣ್ಣು | | ಪತಿ | |

**ಊ. ಕೆಳಗಿನ ಪದಗಳಿಗೆ ಸೂಕ್ತವಾದ ವಿರುದ್ಧಾರ್ಥಕ ಪದ ಬರೆಯಿರಿ.**

**ಮಾದರಿ:** ಅಕ್ಷರಸ್ಥ X ಅನಕ್ಷರಸ್ಥ

| | **ವಿರುದ್ಧಾರ್ಥಕ ಪದ** | | **ವಿರುದ್ಧಾರ್ಥಕ ಪದ** |
|---|---|---|---|
| ಇಳಿಕೆ | | ಹಿನ್ನಡೆ | |
| ದೂರ | | ಹಿರಿಯ | |
| ಸ್ವರ್ಗ | | ಹುಟ್ಟು | |
| ನೂತನ | | ಹೊರಗೆ | |
| ಪ್ರತ್ಯಕ್ಷ | | ಹ್ರಸ್ವ | |
| ನೀತಿ | | ಪರ | |
| ಅಂತರಂಗ | | ವಿಶ್ವಾಸ | |
| ಮೃದು | | ಪಾಪ | |
| ಹಗಲು | | ಶಾಪ | |
| ಸರಸ | | ಸ್ವೀಕಾರ | |
| ಸುಗಂಧ | | ಪ್ರಾಚೀನ | |
| ಗುಣ | | ಸಹಕಾರ | |
| ಸದ್ಗುಣ | | ಸುಖ | |
| ಶೀತ | | ವರ್ಗೀಯ | |
| ಸಹಿತ | | ಆದಿ | |
| ವಿವೇಕ | | ಹೊರಗೆ | |
| ವಿಶ್ರಾಂತ | | ಸ್ವಾರ್ಥಿ | |
| ಸ್ವದೇಶ | | ಹಗುರ | |
| ಸ್ವರ್ಗ | | ಸಿಂಧು | |

ಋ. ಗ್ರಾಮ್ಯ ಪದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆದಿರುವುದನ್ನು ಗುರುತಿಸಿ ಬರೆಯಿರಿ.

**ಮಾದರಿ:** **ಗ್ರಾಮ್ಯಪದ** – ಬ್ಯಾಸರ **ಗ್ರಾಂಥಿಕಪದ** – ಬೇಸರ

| | |
|---|---|
| ವೊಯ್ತಾಯಿದ್ದು – ಹೋಗುತ್ತಿದ್ದು | ಮಕ್ಕೆಲ್ಲಾ – ಮಕ್ಕಳೆಲ್ಲ |
| ಏಸೊಂದು – ಎಷ್ಟೊಂದು | ಸಾಕಾಯ್ತು– ಸಾಕಾಗಿದೆ |
| ಕುಂತಾಳು – ಕುಳಿತಿದ್ದಾಳೆ | ಎಂಗೋ – ಹೇಗೋ |
| ತೊಳದೇನು – ತೊಳೆಯುತ್ತೇನೆ | ಪರ್ತಾಪ – ಪ್ರತಾಪ |
| ಮನ್ಯಾಗ – ಮನೆಯಲ್ಲಿ | ನಿಮ್ದೇ – ನಿಮ್ಮದೇ |
| ಎತ್ವಾಸ – ವ್ಯತ್ಯಾಸ | ಹೆಂಗಾರ – ಹೇಗಾದರು |
| ಹೊಲ್ದಾಗ – ಹೊಲದಲ್ಲಿ | ವಚ್ನ – ವಚನ |
| ಎಂಗೈತಿ – ಹೇಗಿದೆ | ಐತೆ – ಇದೆ |
| ಆಯ್ತಾವ್ರ – ಆದಿತ್ಯವಾರ | ಮುರ್ದಂಗೆ – ಮುರಿದಹಾಗೆ |
| ಬೇಸ್ತಾವ್ರ – ಬೃಹಸ್ಪತಿವಾರ | ಆತ್ಲಾಗಿರ್ಲಿ – ಆಕಡೆ ಇರಲಿ |
| ವೊಟ್ಗೆ – ಹೊಟ್ಟೆಗೆ | ವೊಂಟೋಯ್ತೀನಿ – ಹೊರಟು ಹೋಗುತ್ತೇನೆ |
| ಇದ್ರು – ಇದ್ದರು | ವೊಪ್ಕಂಬಿಡಿ – ಒಪ್ಪಿಕೊಂಡುಬಿಡಿ |
| ಬ್ಯಾಡ – ಬೇಡ | ಈವಾಗ್ಲೇ – ಈಗಲೇ |
| ಸಿವಾ – ಶಿವಾ | ವೋ – ಓಹೋ |

ನೀವು ಓದಿದ ಎಲ್ಲಾ ಗ್ರಾಮ್ಯ ಪದಗಳನ್ನು ಒಮ್ಮೆ ಬರೆಯಿರಿ.

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |

**ಎ. ಕೆಳಗೆ ಕೊಟ್ಟಿರುವ ದ್ವಿರುಕ್ತಿಗಳನ್ನು ಗುರುತಿಸಿ ಜೋಡಿಸಿ ಬರೆಯಿರಿ.**

**ಮಾದರಿ:** ನಡೆ ನಡೆ

ನಡೆ → ಬೇಡಿ
ಬೇಡಿ → ನಡೆ

| 'ಅ' | | 'ಬ' |
|---|---|---|
| ಬಂದೆ | | ತಿಂದು |
| ಬನ್ನಿರಿ | | ಬಾ |
| ರಾಶಿ | | ಅಮ್ಮಾ |
| ಲಕ್ಷ | | ಬಂದೆ |
| ದೊಡ್ಡ | | ಸಹಸ್ರ |
| ಓಡು | | ಬನ್ನಿರಿ |
| ಕಳ್ಳಿ | | ತಿನ್ನು |
| ಬರಲಿ | | ರಾಶಿ |
| ಬೇಗ | | ಲಕ್ಷ |
| ನೋಡಿ | | ದೊಡ್ಡ |
| ಸಾಲು | | ಚಿಕ್ಕ |
| ಬನ್ನಿ | | ಓಡು |
| ತಿನ್ನು | | ಕಳ್ಳಿ |
| ಸಹಸ್ರ | | ಬರಲಿ |
| ಅಮ್ಮಾ | | ಬನ್ನಿ |
| ಬಾ | | ಬೇಗ |
| ತಿಂದು | | ಸಾಲು |
| ಚಿಕ್ಕ | | ನೋಡಿ |

**ಏ. ವಾಕ್ಯಗಳಲ್ಲಿರುವ ದ್ವಿರುಕ್ತಿಗಳನ್ನು ಗುರುತಿಸಿ ಅಡಿಗೆರೆ ಹಾಕಿ ಬರೆಯಿರಿ.**

**ಮಾದರಿ :** ನನ್ನ ಅಣ್ಣನು ಅಡಿಗಡಿಗೂ ಕಾಳಜಿ ವಹಿಸಿ ನೋಡಿಕೊಳ್ಳುತ್ತಾನೆ. | **ಅಡಿಗಡಿಗೂ** |

| | |
|---|---|
| 1. ತಾಯಿಯು ಮಗುವನ್ನು ಕರೆಕರೆದು ಊಟ ಮಾಡಿಸಿದಳು. | |
| 2. ಕೃಷ್ಣನು ಗೋಪಿಯರ ಮನೆಯಲ್ಲಿ ಮೆಲ್ಲಮೆಲ್ಲನೆ ಬೆಣ್ಣೆ ತಿಂದನು. | |
| 3. ದಾಸರು ಊರೂರು ಸುತ್ತಿ ಕೀರ್ತನೆಗಳನ್ನು ಹಾಡಿದರು. | |
| 4. ಪ್ರವಾಸದ ವಿಷಯ ತಿಳಿದ ಮಕ್ಕಳು ಒಳಗೊಳಗೆ ಸಂತೋಷಪಟ್ಟರು. | |
| 5. ಪ್ರತಿಯೊಬ್ಬರು ಒಂದೊಂದು ಗಿಡವನ್ನಾದರೂ ನೆಡಬೇಕು. | |
| 6. ನುಡಿದರೆ ಲಿಂಗ ಮೆಚ್ಚಿ ಹೌದೌದು ಎನ್ನುವಂತಿರಬೇಕು. | |
| 7. ನಾವು ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಬೇಕು. | |
| 8. ಮದುವೆಯಲ್ಲಿ ಬಂಧುಗಳು ಅಲ್ಲಲ್ಲಿ ಸಂಭಾಷಣೆ ಮಾಡುತ್ತಿದ್ದರು. | |
| 9. ಮೊತ್ತಮೊದಲು ತೇನ್‌ಸಿಂಗ್‌ನು ಹಿಮಾಲಯದ ಶಿಖರವನ್ನು ಏರಿದನು. | |
| 10. ಕಟ್ಟಕಡೆಗೆ ಎಲ್ಲರೂ ಜಯವನ್ನು ಬಯಸುತ್ತಾರೆ. | |
| 11. ಜನರು ಕಾಡನ್ನು ಕಡಿದು ಬಟ್ಟ ಬಯಲನ್ನಾಗಿ ಮಾಡುತ್ತಿದ್ದಾರೆ. | |
| 12. ದಟ್ಟವಾದ ಕಾಡುಗಳಲ್ಲಿ ಮರಗಳು ಹತ್ತಿರ ಹತ್ತಿರವಾಗಿ ಬೆಳೆದಿರುತ್ತವೆ. | |
| 13. ವಿದ್ಯಾರ್ಥಿಗಳು ಸಿಹಿತಿಂಡಿಯನ್ನು ಎರಡೆರಡು ಬಾರಿ ತಿಂದರು. | |
| 14. ನಾವೆಲ್ಲರು ಬೆಟ್ಟದ ತುತ್ತತುದಿಯನ್ನು ಮುಟ್ಟಿದೆವು. | |
| 15. ಬೆಂಗಳೂರಿನಲ್ಲಿ ಒಮ್ಮೊಮ್ಮೆ ಜೋರಾಗಿ ಗಾಳಿ ಬೀಸುತ್ತದೆ. | |

ಐ. ಜೋಡು ನುಡಿಗಳನ್ನು ಹೆಕ್ಕಿ ಹೊಂದಿಸಿ ಬರೆಯಿರಿ.

**ಮಾದರಿ:** ತಿಂಡಿ–ತೀರ್ಥ

ತಿಂಡಿ, ತನು, ತಂಗಿ, ಬೇವು, ಮೇಡು, ನಯ, ಕಹಿ, ಕಸ, ಕಸಾಲೆ, ನೀತಿ, ಪಕ್ಕ
ರುಜಿನ, ಪೇರು, ಬಿಳುಪು, ಜೋಡು, ಬೀದಿ, ಅವಳಿ, ಕಟ್ಟೆ, ಹಸೆ, ಹಾವ

| | |
|---|---|
| ಕಪ್ಪು | |
| ಕಾಡು | |
| | ಬೆಲ್ಲ |
| | ತಿನಿಸು |
| ಅಕ್ಕ | |
| ರೀತಿ | |
| ಖಾಯಿಲೆ | |
| | ಕಡ್ಡಿ |
| ರೋಗ | |

| | |
|---|---|
| ಹಾಡು | |
| | ಮನ |
| ಈಡು | |
| | ಜವಳಿ |
| | ವಿನಯ |
| ಕೆರೆ | |
| ಹಾದಿ | |
| | ಭಾವ |
| ಸಿಹಿ | |

ಒ. ಕೆಳಗಿನ ಸರ್ವಜ್ಞ ವಚನವನ್ನು ಗಮನವಿಟ್ಟು ಓದಿ. ಚುಟುಕಾಗಿ ಇದರ ಸಾರಾಂಶವನ್ನು ಬರೆಯಿರಿ.

1. ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು?
ಎತ್ತು ಗಾಣವನು ಸುತ್ತಿ ತಾ । ನಿತ್ಯದಲಿ
ಸುತ್ತಿ ಬಂದಂತೆ ಸರ್ವಜ್ಞ॥

2. ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ
ದುರ್ಜನರ ಸಂಗನೊಡನಾಟ । ಬಚ್ಚಲಿನ
ರೊಚ್ಚಿನಂತಿಹುದು ಸರ್ವಜ್ಞ॥

**ಓ. ಮಾದರಿಯಂತೆ ನುಡಿಗಟ್ಟು (ಪಡೆನುಡಿ) ಪತ್ತೆಹಚ್ಚಿ ಬರೆಯಿರಿ.**

**ಮಾದರಿ:** ಪೊಲೀಸಿನವರನ್ನು ಕಂಡ ಕಳ್ಳರು ಕಾಲಿಗೆ ಬುದ್ಧಿ ಹೇಳಿದರು. **ಕಾಲಿಗೆ ಬುದ್ಧಿ ಹೇಳು**

| | |
|---|---|
| ಶಾಲೆಯ ಮಕ್ಕಳು ಓದು–ಬರಹದಲ್ಲಿ ಎತ್ತಿದಕೈ. | |
| ಸಹಾಯ ಮಾಡಿದವರ ಹೊಟ್ಟೆ ತಣ್ಣಗಿರಲಿ ಎಂದು ಹರಸುತ್ತಾರೆ. | |
| ರೈತರು ಬಿಸಿಲಿನಲ್ಲಿ ನಡು ಬಗ್ಗಿಸಿ ಕೆಲಸ ಮಾಡುತ್ತಾರೆ. | |
| ತುಂಟ ಮಕ್ಕಳು ತಂದೆ–ತಾಯಿಗಳಿಗೆ ಬಿಸಿ ತುಪ್ಪದಂತೆ | |
| ಮುಪ್ಪಿನ ಕಾಲದಲ್ಲಿ ಮಕ್ಕಳು ತಂದೆ–ತಾಯಿಗಳಿಗೆ ದಿಕ್ಕಾಗಬೇಕು. | |
| ತಾನ್‌ಸೇನನ ಸಂಗೀತಕ್ಕೆ ಎಲ್ಲರೂ ತಲೆದೂಗುತ್ತಿದ್ದರು. | |

**ಔ. ಕೆಳಗಿನ ಸೂಚನೆಗಳನ್ನು ಗಮನಿಸಿ ಪದಗಳಿಗೆ ಗ್ರಾಂಥಿಕ ರೂಪವನ್ನು ಆರಿಸಿ ಬರೆಯಿರಿ.**

| ‘ಹಂಗ’ ಪದದ ಗ್ರಾಂಥಿಕ ರೂಪವಿದು ________ | | | |
|---|---|---|---|
| ಎ) ಹಾಗೆ | ಬಿ) ಹೇಗೆ | ಸಿ) ಹೀಗೆ | ಡಿ) ಹೋಗು |

| ‘ಸಕ್ಕರಿ’ ಪದದ ಗ್ರಾಂಥಿಕ ರೂಪ ________ | | | |
|---|---|---|---|
| ಎ) ಸಕ್ಕಾರೆ | ಬಿ) ಸಕ್ಕರೆ | ಸಿ) ಸಕ್ರಿ | ಡಿ) ಶರ್ಕರ |

| ‘ಕುಂತವಳೆ’ ಪದದ ಗ್ರಾಂಥಿಕ ರೂಪ ________ | | | |
|---|---|---|---|
| ಎ) ಕುಳಿತಿದ್ದಾಳೆ | ಬಿ) ಕುಳಿತಳು | ಸಿ) ಕುಳಿತಿದ್ದಳು | ಡಿ) ಕುಳಿತಿರುವಳು |

| ‘ನೆನೆಯಾಲಿ’ ಪದದ ಗ್ರಾಂಥಿಕ ರೂಪವಿದು ________ | | | |
|---|---|---|---|
| ಎ) ನೆನೆಯಲಿ | ಬಿ) ನೆನೆಯುವುದು | ಸಿ) ನೆನೆಯೋಣ | ಡಿ) ನೆನೀಲಿ |

| ‘ತೊಳೆದೇನ’ ಪದದ ಗ್ರಾಂಥಿಕ ರೂಪ ________ | | | |
|---|---|---|---|
| ಎ) ತೊಳೆದೆನು | ಬಿ) ತೊಳೆಯುವೆನು | ಸಿ) ತೊಳೆಯುತ್ತೇನೆ | ಡಿ) ತೊಳೆದೇನು |

**ಅಂ. 1. ಮಾದರಿಯಂತೆ ಕೊಟ್ಟಿರುವ ಖಾಲಿ ಜಾಗದಲ್ಲಿ ಸೂಕ್ತ ಪದಗಳನ್ನು ಬಳಸಿ ಸರಳ ವಾಕ್ಯ ರಚಿಸಿ.**

**ಮಾದರಿ:** ರಾಮನು ಹಾಡನ್ನು ಹಾಡಿದನು. (ಮಾತನ್ನು, ಕೃತಿಯನ್ನು, ಹಾಡನ್ನು)

1) ರಹೀಮನು ______________ ಆಡುವನು. (ಆಟವನ್ನು, ನೋಟವನ್ನು, ಊಟವನ್ನು)

2) ಶಾಂತಲೆಯು ______________ ಮಾಡಿದಳು. (ನರ್ತನವನ್ನು, ಶಾಲೆಯನ್ನು, ಹಾಡನ್ನು)

3) ರಾಜನು ______________ ಮಾಡಿದನು. (ಯುದ್ಧವನ್ನು, ಮಳೆಯಿಂದ, ಹಾಡನ್ನು)

4) ಅಂಬೇಡ್ಕರ್‌ರವರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ______________ ತೆರಳಿದರು.
(ಪುಸ್ತಕದಿಂದ, ಇಂಗ್ಲೆಂಡಿಗೆ, ಬಸ್ಸನ್ನು)

**2. ಮಾದರಿಯಂತೆ ಸಂಯೋಜಿತ ವಾಕ್ಯಗಳನ್ನು ರಚಿಸಿ.**

**ಮಾದರಿ:** 1) ಮಕ್ಕಳು ಚೆಂಡನ್ನು ಆಡುತ್ತಾರೆ; ಆದರೆ ಅವರಿಗೆ ಕೊಡಲು ಸಾಕಷ್ಟು ಚೆಂಡುಗಳಿರಲಿಲ್ಲ.
2) ಚನ್ನಕೇಶವನು ಚೆನ್ನಾಗಿ ಓದುತ್ತಾನೆ; ಆದ್ದರಿಂದ ತರಗತಿಯಲ್ಲಿ ಮೊದಲಿಗನಾಗಿದ್ದಾನೆ.

| |
|---|
| |
| |
| |
| |
| |
| |

**3. ಮಾದರಿಯಂತೆ ಮಿಶ್ರವಾಕ್ಯಗಳನ್ನು ರಚಿಸಿ.**

**ಮಾದರಿ:** ಶಾಲಾ ಮಕ್ಕಳ ನಾಟಕ ನೋಡಲು ಹೆಚ್ಚು ಜನ ಬರುವರೆಂದು ತಿಳಿದು ಶಿಕ್ಷಕರು ಸಂತಸಪಟ್ಟರು.

| |
|---|
| |
| |
| |
| |
| |

**4. ಈ ಕೆಳಗೆ ನೀಡಲಾದ ವಾಕ್ಯಗಳನ್ನು ಓದಿ, ಸಾಮಾನ್ಯವಾಕ್ಯ, ಸಂಯೋಜಿತ ವಾಕ್ಯ, ಮಿಶ್ರವಾಕ್ಯಗಳನ್ನು ಗುರುತಿಸಿ ಪ್ರತ್ಯೇಕವಾಗಿ ಬರೆಯಿರಿ.**

**ಮಾದರಿ:** ಮಕ್ಕಳು ಹಾಲನ್ನು ಕುಡಿಯುತ್ತಾರೆ;
ಆದರೆ ಅವರಿಗೆ ಕೊಡಲು ಸಾಕಷ್ಟು ಹಾಲಿರಲಿಲ್ಲ. (ಸಂಯೋಜಿತ ವಾಕ್ಯ)

| |
|---|
| ಸುಮತಿಯು ತುಂಬಾ ಚೆನ್ನಾಗಿ ಶಹನಾಯಿ ನುಡಿಸಿದಳು. |
| |
| ಗಾಂಧೀಜಿಯವರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಆಫ್ರಿಕಾಕ್ಕೆ ಹೋದರು. |
| |
| ವೀರಕುಮಾರನು ಪ್ರವಾಸಕ್ಕೆ ತೆರಳಲು ನಿರ್ಧರಿಸಿದನಾದರೂ ಅವನ ನಿರ್ಧಾರಕ್ಕೆ ಒಪ್ಪಿಗೆ ಸಿಗಲಿಲ್ಲ. |
| |
| ತಂದೆಯವರ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ತುಂಬಾ ಮರುಗಿದ. |
| |
| ಗುರುಗಳು ಶಾಲೆಗೆ ಹೋದರೆಂಬ ಸುದ್ದಿ ತಿಳಿದು ಮಕ್ಕಳೆಲ್ಲರೂ ಓಡಿ ಬಂದರು. |
| |
| ವಿದ್ಯಾರ್ಥಿಗಳು ಕ್ರೀಡಾಕೂಟಕ್ಕೆ ಹೋದರು: ಆದರೆ ಶ್ರದ್ಧೆಯಿಂದ ಆಡಲಿಲ್ಲ. |
| |

**ಅಃ. 1. ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

| | |
|---|---|
| 1. ತತ್ಪುರುಷ, ಸವರ್ಣದೀರ್ಘ, ದ್ವಂದ್ವ, ದ್ವಿಗು | |
| 2. ದೇವಮಂದಿರ, ಹಗಲುಗನಸು, ಹಿರಿಮಗ, ತಲೆನೋವು | |
| 3. ಗಿರಿವನ, ಹಿಂದಲೆ, ಅಂಗೈ, ಕೆಳದುಟಿ | |
| 4. ಆ ಕಲ್ಲು, ಆ ಮನೆ, ಅರಮನೆ, ನೆಯ್ದುವಸ್ತ್ರ | |
| 5. ಹೆಬ್ಬಾವು, ಕಾರ್ಮೋಡ, ದೇವಮಂದಿರ, ಮೆಲ್ನುಡಿ | |
| 6. ಮೈಮುಟ್ಟಿ, ತಲೆಬಾಗಿ, ಕರವಸ್ತ್ರ, ಕೈಯಾನು | |
| 7. ಬೆಟ್ಟದಾವರೆ, ಕಾರ್ಮೋಡ, ಬೆಳ್ಗೊಡೆ, ಹಳೆಗನ್ನಡ | |

**2. ಮೊದಲೆರಡು ಪದಗಳ ಸಂಬಂಧದಂತೆ ಮೂರನೆಯ ಪದದ ಸಂಬಂಧ ಬರೆಯಿರಿ.**

| | | | | | | | |
|---|---|---|---|---|---|---|---|
| 1. | ಅಂಬುಜ | : | ಬಹುವ್ರೀಹಿ | : : | ಕೈಚಾಚು | : | |
| 2. | ಕೆಂದಾವರೆ | : | ಕರ್ಮಧಾರಯ | : : | ಪಂಚತಂತ್ರ | : | |
| 3. | ರಾಜೀವಸಖ | : | ಬಹುವ್ರೀಹಿ | : : | ದ್ವಿದಳ | : | |
| 4. | ಹಳೆಗನ್ನಡ | : | ಕರ್ಮಧಾರಯ | : : | ಈ ಮನೆ | : | |
| 5. | ಕಣ್ಣಿನ+ಒಳಗೆ | : | ಒಳಗಣ್ಣು | : : | ಕಪ್ಪನೆಯ + ನಾಡು | : | |

**3. ಈ ಕೆಳಗೆ ಕೊಟ್ಟಿರುವ ಸಮಾಸ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ.**

| | | | |
|---|---|---|---|
| 1. | ಯಜ್ಞತುರಗ = | | |
| 2. | ಬಾಯುಪಚಾರ = | | |
| 3. | ಸವಿಗೂಳು = | | |
| 4. | ಮೃಷ್ಟಾನ್ನ = | | |
| 5. | ಏಕಾಕ್ಷರೀ = | | |
| 6. | ಮೂಜಗ = | | |
| 7. | ಪಂಚಾಕ್ಷರೀ = | | |
| 8. | ಚಳಿಗಾಲ = | | |
| 9. | ಸಪ್ತಾಕ್ಷರೀ = | | |

**4. ಈ ಕೆಳಗಿನ ಗಾದೆ ಮಾತುಗಳನ್ನು ಪೂರ್ಣಗೊಳಿಸಿ.**

1) ಕೈ ಕೆಸರಾದರೆ ____________________

2) ಹಾಸಿಗೆ ಇದ್ದಷ್ಟು ____________________

3) ಬೆಳೆಯುವ ಸಿರಿ ____________________

4) ದೇಶ ಸುತ್ತು ____________________

5) ಕುಂಬಾರನಿಗೆ ವರ್ಷ ____________________

**ಕ. ನೀವು ಪೂರ್ಣಗೊಳಿಸಿದ ಗಾದೆಗಳ ಸಹಾಯದಿಂದ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸೋಣ.**

1. ದುಡಿಮೆಯ ಮಹತ್ವ ತಿಳಿಸುವ ಗಾದೆ.

2. ಮಿತ ಬಳಕೆ, ಮಿತವಾದ ಖರ್ಚು ಮತ್ತು ಸರಳ ಜೀವನದ ಮಹತ್ವ ತಿಳಿಸುವ ಗಾದೆ.

3. ಜ್ಞಾನ ಗಳಿಸುವ ಮಾರ್ಗ ತಿಳಿಸುವ ಗಾದೆ.

4. ಬಾಲ್ಯ ಜೀವನದ ಮಹತ್ವ ತಿಳಿಸುವ ಗಾದೆ.

5. ಸುಂದರ ನಿರ್ಮಾಣದ ಹಿಂದಿರುವ ಶ್ರಮದ ಮಹತ್ವ ತಿಳಿಸುವ ಗಾದೆ.

**ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ**

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಕಥೆಗಳನ್ನು ಓದಿ ಮೌಖಿಕ ಮತ್ತು ಲಿಖಿತರೂಪದಲ್ಲಿ ಅಭಿವ್ಯಕ್ತಿಗೊಳಿಸುವೆ. | | | |
| 2. | ಸಂಧಿ ಮತ್ತು ಸಮಾಸಗಳನ್ನು ಅರ್ಥೈಸಿಕೊಳ್ಳುವೆ. | | | |
| 3. | ದ್ವಿರುಕ್ತಿ, ಜೋಡುನುಡಿ, ನುಡಿಗಟ್ಟುಗಳನ್ನು ಗುರುತಿಸಿ ಬರೆಯುವೆ. | | | |

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|---|---|

# 9. ಅಭ್ಯಾಸ

## ಪತ್ರಲೇಖನ, ಪ್ರಬಂಧ ಮತ್ತು ಸಂಭಾಷಣೆಗಳು.

**ಅ. ಕೆಳಗಿನ ಮಾದರಿ ಪತ್ರವನ್ನು ಗಮನಿಸಿ. ಅದರಂತೆ ವೈಯಕ್ತಿಕ ಪತ್ರವನ್ನು ಸಿದ್ಧಪಡಿಸಿ.**

**ವೈಯಕ್ತಿಕ ಪತ್ರ (ಕೌಟುಂಬಿಕ ಪತ್ರ)**

ಕ್ಷೇಮ ಶ್ರೀ ಹೆಸರು ____________

ಸ್ಥಳ ____________

ದಿನಾಂಕ ____________

____________ ರವರಿಗೆ, ನಿಮ್ಮ ಪ್ರೀತಿಯ ____________ ಮಾಡುವ ____________ ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ಅಲ್ಲಿ ನಿಮ್ಮ ಕ್ಷೇಮ ಸಮಾಚಾರದ ಬಗ್ಗೆ ಪತ್ರ ಬರೆಯಿರಿ.

____________________________________________

____________________________________________

____________________________________________

____________________________________________

____________________________________________

____________________________________________

____________________________________________

____________________________________________

ಮನೆಯಲ್ಲಿರುವ ಎಲ್ಲ ಹಿರಿಯರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ, ಕಿರಿಯರಿಗೆಲ್ಲಾ ನನ್ನ ಆಶೀರ್ವಾದಗಳು.

ವಂದನೆಗಳೊಂದಿಗೆ,

ಇಂತಿ, ನಿಮ್ಮ ಪ್ರೀತಿಯ

**<u>ಹೊರ ವಿಳಾಸ</u>**

____________________

ಇಂದ, ____________________

____________________

____________________

ಇವರಿಗೆ, ____________________

____________________

## ಮಾದರಿ ವ್ಯಾವಹಾರಿಕ ಪತ್ರ

**ಆ. ಮಾದರಿಯನ್ನು ಗಮನಿಸಿ ಪತ್ರವನ್ನು ಪೂರ್ಣಗೊಳಿಸಿ.**

ಇಂದ,

______________________

______________________

______________________

______________________

ಇವರಿಗೆ,

______________________

______________________

______________________

______________________

ಮಾನ್ಯರೇ,

ವಿಷಯ:

________________________________________________

________________________________________________

________________________________________________

________________________________________________

________________________________________________

________________________________________________

________________________________________________

________________________________________________

ವಂದನೆಗಳೊಂದಿಗೆ,

ಸ್ಥಳ: ________________

ಇಂತಿ ತಮ್ಮ ವಿಶ್ವಾಸಿ

ದಿನಾಂಕ : ______________

ಇಂದ,

______________________

______________________

______________________

ಇವರಿಗೆ,

______________________

______________________

______________________

**ಇ. ಕೆಳಗಿನ ಚಿತ್ರಕಥೆ ಗಮನಿಸಿ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.**



| |
|---|
| ಮೊಸಳೆ ತನ್ನ ಹೆಂಡತಿಗೂ ನೇರಳೆಹಣ್ಣುಗಳನ್ನು ತೆಗೆದುಕೊಂಡುಹೋಗಿ ಕೊಡುತ್ತಿತ್ತು. |
| ನದಿಯ ಮಧ್ಯೆ ಮೊಸಳೆ ತನ್ನ ಗೆಳೆಯನಿಗೆ ನಿಜ ವಿಚಾರ ತಿಳಿಸಿತು. |
| ಮೊಸಳೆ ಕೋತಿಯನ್ನು ತನ್ನ ಮನೆಗೆ ಊಟಕ್ಕೆ ಕರೆಯಿತು. |
| ಒಂದು ನದಿ ದಂಡೆಯಲ್ಲಿ ಮೊಸಳೆ ವಾಸಿಸುತ್ತಿತ್ತು. |
| ಮೊಸಳೆಗೆ ಕೋತಿ ನೇರಳೆ ಹಣ್ಣುಗಳನ್ನು ನೀಡುತ್ತಿತ್ತು. |
| ಕೋತಿ ಮೊಸಳೆಯ ಮಾತು ನಂಬಿ ಮೊಸಳೆಯ ಬೆನ್ನೇರಿ ಕುಳಿತುಕೊಂಡಿತು. |
| ಮೊಸಳೆಯ ಹೆಂಡತಿಗೆ ಕೋತಿಯ ಹೃದಯ ತಿನ್ನಬೇಕೆಂದು ಆಸೆಯಾಯಿತು. |

**ಕಥೆಯ ಸರಿಯಾದ ಕ್ರಮ :**

| |
|---|
| |
| |
| |
| |
| |
| |
| |

**ಈ. ಕೆಳಗಿನ ಕಥೆ ನಿನಗೆ ನೆನಪಿದೆಯಾ? ಎಲ್ಲ ಸುಳುಹುಗಳನ್ನು ಸೇರಿಸಿ ಕಥೆ ಹೆಣೆಯಿರಿ ಮತ್ತು ಸೂಕ್ತವಾದ ಶೀರ್ಷಿಕೆಯನ್ನು ನೀಡಿ.**

ಹಳ್ಳಿ, ಕುರುಬ, ಕುರಿಗಳು, ಮೇಯಿಸು, ಕುರಿಮಂದೆ, ಬೆಟ್ಟದತಪ್ಪಲು, ತರಲೆ ಹುಡುಗ, ಬೇಸರ, ತಮಾಷೆ ಮಾಡು, ತೋಳ ಬಂತು ತೋಳ. ಕಿರುಚು, ಹಳ್ಳಿಯ ಜನರು, ತೋಳ, ಕಾಣಿಸಲಿಲ್ಲ, ಹಾಯಾಗಿ ಮೇಯು, ಕುರುಬರ ಹುಡುಗ, ಕೊಳಲು ನುಡಿಸು, ಕುಳಿತಿದ್ದ, ಮರುದಿವಸ, ತೋಳ ಬಂತು ತೋಳ, ಪುನಃ, ಜನರು ಹೊರಟು ಹೋದರು. ಮುಂದಿನ ದಿವಸ, ತೋಳ, ಬಂದೇ ಬಿಟ್ಟಿತು. ಕುರಿಮಂದೆಯ ಕಡೆಗೆ, ನುಗ್ಗು, ಕುರುಬರ ಹುಡುಗ, ತೋಳ ಬಂತು ತೋಳ, ಹಳ್ಳಿಯ ಜನರು, ಸಹಾಯಕ್ಕೆ ಬರಲಿಲ್ಲ, ಕುರಿಗಳನ್ನು ಸಾಯಿಸು.

**ಶೀರ್ಷಿಕೆ :**

ಉ. ಕೆಳಕಂಡ ಚಿತ್ರವನ್ನು ಗಮನಿಸಿ, ಇದನ್ನು ಕುರಿತು ಪ್ರಬಂಧ ಬರೆದು, ಇದಕ್ಕೊಂದು ಶೀರ್ಷಿಕೆ ಬರೆಯಿರಿ.



ಶೀರ್ಷಿಕೆ :

**ಊ. ಕೆಳಕಂಡ ತರಗತಿ ಸನ್ನಿವೇಶವನ್ನು ಗಮನವಿಟ್ಟು ನೋಡಿ. ಇಲ್ಲಿ ನಡೆದಿರಬಹುದಾದ ಸಂಭಾಷಣೆಯನ್ನು ನಿಮ್ಮ ಮಾತಿನಲ್ಲಿ ಚಿತ್ರಿಸಿ.**



| |
|---|
| **ಶಿಕ್ಷಕ :** |
| **ವಿದ್ಯಾರ್ಥಿ :** |
| **ಶಿಕ್ಷಕ :** |
| **ವಿದ್ಯಾರ್ಥಿ :** |
| **ಶಿಕ್ಷಕ :** |
| **ವಿದ್ಯಾರ್ಥಿ :** |
| **ಶಿಕ್ಷಕ :** |
| **ವಿದ್ಯಾರ್ಥಿ :** |
| **ಶಿಕ್ಷಕ :** |
| **ವಿದ್ಯಾರ್ಥಿ :** |
| **ಶಿಕ್ಷಕ :** |
| **ಶಿಕ್ಷಕಿ :** |

**ಋ. ಕೆಳಕಂಡ ಚಿತ್ರ ನಿಮ್ಮ ಮನೆಯೆಂದು ಭಾವಿಸಿ ಇದರ ಬಗ್ಗೆ ನಿಮಗನಿಸಿದ್ದನ್ನು ಬರೆಯಿರಿ.**



ಎ. ಕೆಳಕಂಡ ಗಾದೆ ಮಾತಿನ ಅರ್ಥವನ್ನು ಬರೆಯಿರಿ.

1. ಅಂಗೈ ಹುಣ್ಣಿಗೆ ಕನ್ನಡಿ ಯಾಕೆ?

2. ಇಬ್ಬರ ಜಗಳ ಮೂರನೆಯವನಿಗೆ ಲಾಭ.

3. ಮನಸ್ಸಿದ್ದರೆ ಮಾರ್ಗ.

### ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಮಾನಕಗಳು | ☺ | 😐 | ☹ |
|---|---|---|---|---|
| 1. | ವೈಯಕ್ತಿಕ ಮತ್ತು ವ್ಯಾವಹಾರಿಕ ಪತ್ರಗಳನ್ನು ಬರೆಯುವೆ. | | | |
| 2. | ಯಾವುದೆ ವಿಷಯದ ಮೇಲೆ ಪ್ರಬಂಧವನ್ನು ರಚಿಸುವೆ. | | | |
| 3. | ಗಾದೆ ಮಾತುಗಳ ಒಳಾರ್ಥವನ್ನು ಅರಿತು ಸಾರಾಂಶವನ್ನು ಬರೆಯುವೆ. | | | |
| 4. | ಸನ್ನಿವೇಶವನ್ನು ಊಹಿಸಿಕೊಂಡು ಬರಹದ ರೂಪದಲ್ಲಿ ಚಿತ್ರಿಸುವೆನು. | | | |

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|---|---|

# 10. ಘಟಕ ಪರೀಕ್ಷೆ–4

**1. ಈ ಪದಗಳಿಗೆ ತದ್ಭವ ರೂಪ ಬರೆಯಿರಿ.**

| | | | | | |
|---|---|---|---|---|---|
| 1. ಆಶ್ಚರ್ಯ | | 2. ಕಾರ್ಯ | | 3. ಕ್ಷಣ | |
| 4. ಭೂಮಿ | | 5. ಪುಸ್ತಕ | | 6. ಶೃಂಗಾರ | |

**2. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

| | | | |
|---|---|---|---|
| 1. ಭೂಮಿ | | | |
| 2. ನೀರು | | | |
| 3. ಯುದ್ಧ | | | |
| 4. ತಾಯಿ | | | |
| 5. ಸಮುದ್ರ | | | |
| 6. ಕಣ್ಣು | | | |

**3. ಕೆಳಕಂಡ ವಿರುದ್ಧಾರ್ಥಕ ಪದಗಳನ್ನು ಬಳಸಿ ವಾಕ್ಯ ರಚಿಸಿ.**

1. ಆರೋಗ್ಯ * ಅನಾರೋಗ್ಯ.

ಆರೋಗ್ಯ : ____________________

ಅನಾರೋಗ್ಯ : ____________________

2. ವಿಶ್ವಾಸ * ಅವಿಶ್ವಾಸ;

ವಿಶ್ವಾಸ : ____________________

ಅವಿಶ್ವಾಸ : ____________________

3. ಭಯ * ನಿರ್ಭಯ

ಭಯ : ____________________

ನಿರ್ಭಯ : ____________________

**4. ಕೆಳಕಂಡ ಗ್ರಾಮ್ಯ ಪದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.**

| | | | | | |
|---|---|---|---|---|---|
| ಮಕ್ಕೆಲ್ಲಾ | | ಹೋಗ್ಲಿ | | ಯೇಳ್ಕೊಂಡು | |
| ಈವಾಗ್ಲೇ | | ಐತೆ | | ತೊಳದೇನು | |
| ಮುರ್ದಂಗೆ | | ಬರ್ರೀ | | ವೊಂಟೋಯ್ತಿನಿ | |

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|---|---|